**ದಿ:28.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು:-**ವಾದಿ ಪರ ಶ್ರೀ.**P.V.K.,** ವಕೀಲರಿಂದ:-

ದಾವಾ ಆಸ್ತಿಯು ವಾದಿಗಳು ಮತ್ತು ಪ್ರತಿವಾದಿ 2 ರವರ ಗಂಡ ಭೀಮಪ್ಪ ಅವರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನಾನು ದಾವಾ ಆಸ್ತಿಯನ್ನು ಖರೀದಿ ಮಾಡಿದ ಸಂದರ್ಭದಲ್ಲಿ ದಾವಾ ಆಸ್ತಿಯು ಭೀಮಪ್ಪ ಅವರ ಹೆಸರಿಗೆ ಪಹಣಿ , ಮುಟೇಷನ್ ನೋಡಿರುತ್ತೇನೆ . ದಾವಾ ಆಸ್ತಿಯನ್ನು ಖರೀದಿ ಮಾಡಿದೆ ಎಂದು ಹೇಳುವ ಸಂದರ್ಭದಲ್ಲಿ ವಾದಿಗಳ ಸಹಿಯನ್ನು ಪಡೆಯಲು ಪ್ರಯತ್ನಿಸಿರುತ್ತಿರ ಎಂದರೆ ಸಾಕ್ಷಿ ಭೀಮಪ್ಪ ಅವರು ನನ್ನ ಸ್ವಂತ ಆಸ್ತಿ ಇದ್ದು , ವಾದಿಗಳ ಸಹಿ ಪಡೆಯುವ ಅವಶ್ಯಕತೆ ಇರುವುದಿಲ್ಲ ಎಂದು

ಹೇಳುತ್ತಾರೆ . ಭೀಮಪ್ಪ ಅವರಿಗೆ ದಾವಾ ಆಸ್ತಿ ಅವರ ಅಣ್ಣ ತಮ್ಮಂದಿರ ನಡುವೆ ಪಾಲುವಿಭಾಗ ಮೂಲಕ ಬಂದಿರುತ್ತದೆ . ವಾದಿಗಳು ಮತ್ತು ಪ್ರತಿವಾದಿ 2 ರವರು ನನಗೆ ದಾವಾ ಆಸ್ತಿ ಖರೀದಿಗೆ ಕೊಟ್ಟಿರುವುದಿಲ್ಲ . ನಾನು ಭೀಮಪ್ಪ ಅವರಿಂದ ಸಾಲದ ಭದ್ರತೆಗಾಗಿ ನಿಡಿ 3 ಕ್ರಯಪತ್ರವನ್ನು ರಚಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಗಳಿಗೆ ಪಾಲುವಿಭಾಗ ನೀಡುವುದನ್ನು ತಪ್ಪಿಸಲು ಕ್ರಯಪತ್ರವನ್ನು ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ದಾವೆಗೆ ಸಲ್ಲಿಸಿರುವ ತಕರಾರಿನಲ್ಲಿರುವ ಮಾಹಿತಿ ಎಲ್ಲಾ ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ:</u> ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು